# ಬ್ರಾಹ್ಮಣ್ಯ ಬಿಟ್ಟರೂ ಕಾರ್ಪಣ್ಯ ಬಿಡಲಿಲ್ಲ!

ಈ ಶೀರ್ಷಿಕೆಯ ಬಗ್ಗೆ ಕ್ಷಮೆಯಿರಲಿ. ಇಪ್ಪತ್ತೊಂದನೇ ಶತಮಾನದ ಹದಿನೇಳನೇ ಇಸವಿಯ ಮಹಾ ಮಹಾ ಜಾತ್ಯತೀತ ಸಂದರ್ಭದಲ್ಲಿ, ಹೀಗೆಲ್ಲ ಒರಲಾಡಕೂಡದೆಂದು ನನಗೆ ಗೊತ್ತು. ಚೆನ್ನಾಗಿಯೇ ಗೊತ್ತು. ಆದರೆ ಹೇಳುವುದಲ್ಲದೆ ಇನ್ನು ವಿಧಿಯಿಲ್ಲವೆಂಬ ಒಂದೇ ಒಂದು ಕಾರಣಕ್ಕೆ, ಈವರೆಗೆ ಯಾರಲ್ಲಿಯೂ ಆಡಿರದ್ದನ್ನು ಇಲ್ಲಿ ಬರೆದಿದ್ದೇನೆ. ಇಷ್ಟಕ್ಕೂ ವಿಷಯವೇ ಇಂಥದ್ದು; ಆಡುವಂತಿಲ್ಲ, ಅನುಭವಿಸುವಂತಿಲ್ಲ ಅನ್ನುವಂಥದ್ದು! ನನ್ನ ಮಟ್ಟಿಗಂತೂ ನಿಜಕ್ಕೂ ಆಡಲಾಗದ, ಆಡದೆ ಅನುಭವಿಸಲಾಗದ ಸಂಗತಿ! ಬ್ರಾಹ್ಮಣರ ಒಳಮನೆಗಳಲ್ಲಿ ಜರುಗುವ ಈ ನಾಣ್ಣುಡಿಯನ್ನು, ಆಡಲಾಗದ ಅನುಭವಿಸಲಾಗದ ಅನುಭವವನ್ನೇ ಉದ್ದೇಶಿಸಿ ಮಾಡಿದ್ದಾರನಿಸುತ್ತದೆ. ಇರಲಿ... ಆಡದೆಯೆ ಉಳಿವುದಿರಲಿ, ಅನುಭವಿಸಲೂ ಆಗದ್ದನ್ನು ಈ ಪರಿ ತೋಡಿಕೊಂಡಾದರೂ, ಸದರಿ ಕಾರ್ಪಣ್ಯದ ಕಷ್ಟ ತಗ್ಗೀತೆನ್ನುವ ಉಮೇದಿನಲ್ಲಿ ಒಂದಿಷ್ಟು ಬರೆದಿದ್ದೇನೆ!

ಏನಂತ ಆದಷ್ಟೂ ಸರಳವಾಗಿ ಹೇಳಿಬಿಡುತ್ತೇನೆ. ನಿಮಗೆ ಗೊತ್ತಿರಬಹುದು, ಮಹಾನಗರಿಯ ಬನಶಂಕರಿಯಲ್ಲೊಂದು ಹೆಸರುವಾಸೀ ದೇವಸ್ಥಾನದ ಮಗ್ಗಲಿನಲ್ಲಿ ನನ್ನ ಮನೆಯಿದೆ. ನನ್ನ ಆಫೀಸು ಕೂಡ ಮನೆಯಿರುವಲ್ಲೇ ಇದೆ. ಕೆಳಗೆ ಮನೆ ಮತ್ತು ಮೇಲೆ ಆಫೀಸು. ಮೂರು ಮಹಡಿಗಳಲ್ಲಿ ಹಬ್ಬಿರುವ, ನನ್ನದೇ ಡಿಸೈನಿರುವ ಈ ಕಟ್ಟಡದಲ್ಲಿ ಅರ್ಧದಷ್ಟು ಮನೆ ಮತ್ತು ಇನ್ನರ್ಧ ಆಫೀಸು. ಆಫೀಸೆಂದ ಮೇಲೆ ಆಳುಕಾಳು ಪ್ಯೂನು ಜವಾನರಂತೆಲ್ಲ ಇರುವುದೇ ತಾನೆ? ಎಂತಲೇ, ಇಡೀ ಕಟ್ಟಡವನ್ನು ಸಂಬಳಿಸಲಿಕ್ಕೆಂದೇ ಆದ ಊಳಿಗಸಂಪದವೂ ನನ್ನಲ್ಲಿದೆ. ಮನೆಯಡುಗೆಗೆಂದೇ ಈಶ್ವರಿಯಿದ್ದಾಳೆ. ಚನ್ನರಾಯಪಟ್ಟಣದ ಕಡೆಯ ಇವಳು, ನನ್ನ ಮನೆಸಮಸ್ತದ ಹೊಟ್ಟೆಗಳದ್ದಲ್ಲದೆ ಅಡುಗೆಮನೆಯ ಒಲೆವುರಿಯನ್ನೂ ನಿಭಾಯಿಸುತ್ತಾಳೆ. ಕಸಮುಸುರೆಗೆಂದು ರೋಜಾವದಿಯಿದ್ದಾಳೆ. ತಮಿಳುಸೀಮೆಯ ಉಳಂದರುಪೇಟೆಯ ರೋಜಾವದಿ, ಕಳೆದಿಪ್ಪತ್ತು ವರ್ಷಗಳಿಂದ ನಮ್ಮಲ್ಲಿದ್ದೇ ಮುಪ್ಪಾಗಿದ್ದಾಳೆ. ಕಾವೇರಿ ಎಂಬ ಕನಕಪುರದ ಕಡೆಯವಳೊಬ್ಬಳು, ಬೆಳಿಗ್ಗೆ–ಸಂಜೆ, ತಲಾ ಎರಡು ಮೂರು ತಾಸು ಬಂದು ಹೋಗುತ್ತಾಳೆ. ಆಫೀಸಿನ ಉಸ್ತುವಾರಿಗೆ ಮಳವಳ್ಳಿಯ ದಾನೇಶ, ಡೆಂಕಣಿಕೋಟೆಯ ಮಾಂತಯ್ಯ ಎಂದಿಬ್ಬರಿದ್ದರೆ, ನನ್ನ ಕಾರೋಡಿಸುವುದಲ್ಲದೆ, ನಾನು ಊರೊಳಗೂ ಊರಾಚೆಗೂ ತಿರುಗಾಡಲು ಸಾಥು ಕೊಡಲಿಕ್ಕೆ ಪಾರಸಮಲ್ ಎಂಬ ಗುಜರಾತಿಯೊಬ್ಬನಿದ್ದಾನೆ. ಇವರೆಲ್ಲರಿಗೂ 'ಕಿರೀಟ'ಪ್ರಾಯನಾಗಿ, ಅಸ್ಸಾಮು ಕಡೆಯಿಂದ ಕೆಲಸಕ್ಕೆಂದೇ ಬೆಂಗಳೂರು ಹೊಕ್ಕ ತಪಸ್ ಎಂದೊಬ್ಬ ಇಪ್ಪತ್ತೆರಡರ ಪೋರ, ಎರಡು